ಈ) ಈ ಪ್ರಕಾರ ಅವ್ಯವಸ್ಥೆ ಮಾಡಿ ಬಸ್ಸುಗಳನ್ನು ಸ್ಥಗಿತಗೊಳಿಸಿ ನಾಗರೀಕರಿಗೆ ಅನಾನುಕೂಲ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

ಉ) ಈಗಲಾದರೂ ಗುಲ್ಬರ್ಗ ಡಿಪೋ ಮತ್ತು ಯಾದಗಿರಿ ಡಿಪೋ ಬಸ್ಸುಗಳು ಸಮಯಕ್ಕೆ ಸರಿಯಾಗಿ ಎಲ್ಲಾ ಮಾರ್ಗಗಳ ಮೇಲೆ ನಡೆಸುವ ವ್ಯವಸ್ಥೆ ಮಾಡಲಾಗುವುಲೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಸೇಡಂದಿಂದ ಯಾದಗಿರಿಗೆ (ಕೋಡ್ಲ್ ಮಾರ್ಗ) - 3 ಬಸ್ಸುಗಳು. ಸೇಡಂದಿಂದ ಸೇಡಂ (ಕೋಡ್ಲಾ ಮಾರ್ಗ) - 2 ಬಸ್ಸುಗಳು.

ಇ) ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದ ಜಾತ್ರೆಗಳಿಗಾಗಿ ಹಾಗೂ ಗ್ರಾಮ ಪಂಚಾಯತಿ ಚುನಾವಣೆಗೆ ಬಸ್ಸುಗಳನ್ನು ಒದಗಿಸಬೇಕಾದುದ್ದರಿಂದ ಸೇಡಂ ತಾಲ್ಲೂಕಿನ ಕೆಲವು ಸೇವೆಗಳನ್ನು ಕ್ರಮಬದ್ಧವಾಗಿ ಆಚರಣೆ ಮಾಡಲಿಲ್ಲ. ಈಗ ಸದರೀ ಸೇವೆಯನ್ನು ಆಚರಣೆ ಮಾಡಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಹೌದು.

ರೈತರು ತಂಬಾಕಿಗೆ ಬೆಳದ ಲಾಭದ ಬೆಲೆ ಬಾರದೆ ಕಂಗಾಲಾಗಿರುವ ಬಗ್ಗೆ.

468 - ಶ್ರೀ ವಸವರಾಜು. ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಾವಿರಾರು ರೈತರು ಅದರಲ್ಲೂ ಪಿರಿಯಾಪಟ್ಟಣ ತಂಬಾಕು ಮಂಡಳಿ ವ್ಯಾಪ್ತಿಯಲ್ಲಿ ಬರುವ ರೈತರು, ವಿ.ಎಫ್.ಸಿ. ತಂಬಾಕು ಬೆಳೆ ಬೆಳೆದು ಲಾಭದ ಬೆಲೆ ಬಾರದೇ ಕಂಗಾಲಾಗಿದ್ದಾರೆ. ಈ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಮಾರುಕಟ್ಟೆಯಲ್ಲಿ ತಂಬಾಕು ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾಗಿರುವುದಿಲ್ಲ. 1999ನೇ ಸಾಲಿಗೆ 40 ಮಿಲಿಯನ್ ಕೆ.ಜಿ. ಗಳಷ್ಟು ವಿ.ಎಫ್.ಸಿ. ತಂಬಾಕನ್ನು ಬೆಳೆಯಲು ತಂಬಾಕು ಮಂಡಳಿ ನಿಗಧಿಪಡಿಸಿತ್ತು. ಅನಧಿಕೃತ ಬೆಳೆಗಾರರು ಯಾವುದೇ ಕಾರಣಕ್ಕೂ ವಿ.ಎಫ್.ಸಿ. ತಂಬಾಕನ್ನು ಬೆಳೆಯಬಾರದೆಂದು ಮುನ್ನೆಚ್ಚರಿಕೆ ನೀಡಲಾಗಿದ್ದರೂ ಸಹ, ಇದನ್ನು ಉಲ್ಲಂಘಿಸಿ 51 ಮಿಲಿಯನ್ ಕೆ.ಜಿ.ಗಳಷ್ಟು ವಿ.ಎಫ್.ಸಿ. ತಂಬಾಕನ್ನು ರೈತರು ಉತ್ಪಾದಿಸುತ್ತಾರೆ.

ನೊಂದಾಯಿಸಿಕೊಂಡಿದ್ದ ಸಾಕಷ್ಟು ರೈತರು ನಿಗಧಿಪಡಿಸಿದ ಪ್ರಮಾಣದಷ್ಟು ತಂಬಾಕನ್ನು ನಿಗಧಿಪಡಿಸದೆ ಹರಾಜು ದಿನಾಂಕಗಳಲ್ಲಿ ಮಾರಾಟ ಮಾಡದೇ ಇದ್ದರಿಂದ ಹಾಗೂ ಹರಾಜು ಮುಕ್ತಾಯದ ದಿನಾಂಕ ನಂತರ ಅನಧಿಕೃತ ಬೆಳೆಗಾರರೊಂದಿಗೆ ಮಾರಾಟಕ್ಕೆ ತಂದಿರುವುದರಿಂದ ಅವರಿಗೆ ಪ್ರಾರಂಭದ ಬೆಲೆ ಸಿಗುತ್ತಿಲ್ಲ.

ಅ) 1999ನೇ ಸಾಲಿನಲ್ಲಿ ಅನಧಿಕೃತವಾಗಿ ಹಾಗೂ ನೊಂದಾಯಿತ ರೈತರು ಹೆಚ್ಚುವರಿ ತಂಬಾಕನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ರೈತ ಪ್ರತಿನಿಧಿಗಳು ಸಲ್ಲಿಸಿದ ಮನವಿಯ ಮೇರೆಗೆ ಭಾರತ ಸರ್ಕಾರವು ಇದಕ್ಕೆ ಅನುಮತಿ ನೀಡಿರುತ್ತದೆ.

ಪಿರಿಯಾಪಟ್ಟಣದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಾಣ

470- ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಾಣ ಯಾವ ಹಂತದಲ್ಲಿದೆ?

ಆ) ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಇ) ಈ ಯೋಜನೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು? ಇದುವರೆಗೂ ಖರ್ಚಾಗಿರುವ ಹಣ ಎಷ್ಟು?

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಪಿರಿಯಾಪಟ್ಟಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಹುಣಸೂರು ಮಾರುಕಟ್ಟೆ ಸಮಿತಿಯ ಉಪ ಮಾರುಕಟ್ಟೆಯಾಗಿದ್ದಾಗ ಉಪ ಮಾರುಕಟ್ಟೆ ನಿರ್ಮಾಣಕ್ಕೋಸ್ಕರ 6 ಎಕರೆ 7 ಗುಂಟೆ ಜಾಗವನ್ನು ಸ್ವಾಧೀನಪಡಿಸಿಕೊಂಡಿರುತ್ತದೆ ಈ ಸಮಿತಿಯು ದಿ : 14-12-1993 ರಲ್ಲಿ ಸ್ವತಂತ್ರ ಮಾರುಕಟ್ಟೆಯಾಗಿ ಹುಣಸೂರು ಮಾರುಕಟ್ಟೆಯಿಂದ ವಿಭಜನೆ ಹೊಂದಿರುತ್ತದೆ. ರೈತರ ಹಾಗೂ ಪೇಟೆ ಕಾರ್ಯಕರ್ತರ ಉಪಯೋಗಕ್ಕಾಗಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

1.	ಕಛೇರಿ ಕಟ್ಟಡ	1 ಸಂಖ್ಯೆ
2.	ಅಂಗಡಿ-ವಾ-ಗೋದಾಮು	6 ಸಂಖ್ಯೆ
3.	ಹರಾಜುಕಟ್ಟೆ	2 ಸಂಖ್ಯೆ
4.	ಅಂಗಡಿ-ವಾ-ಗೋದಾಮು (ಮುಕ್ತಾಯದ ಹಂತದಲ್ಲಿದೆ)	3 ಸಂಖ್ಯೆ

ಪ್ರಾಂಗಣದ ರೂಪುರೇಖೆಯ ನಕ್ಷೆಯನ್ನು ತಯಾರಿಸಲಾಗಿದೆ. ಸದರಿ ರೂಪು ರೇಖೆಯ ನಕ್ಷೆಯಲ್ಲಿ ಪೇಟೆ ಕಾರ್ಯಕರ್ತರ ಉಪಯೋಗ 12 ನಿವೇಶನಗಳನ್ನು ಹಂಚಿಕೆಗೆ ಅನುವು ಮಾಡಲಾಗಿದೆ.